ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಅವ ಸತ್ತ. ಅವನ ಕುಟುಂಬಕ್ಕೆ ಪರಿಹಾರಧನ ಕೊಡಬೇಕು. ಮತ್ತು ಅವನಿಗೆ ಮರಣೋತ್ತರ ಶೌರ್ಯ ಪ್ರಶಸ್ತಿಯನ್ನು ಕೊಡಬೇಕೆಂದೆ ಗೃಹಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರೋಷನ್ ಬೇಗ್ (ಗೃಹ ಸತಿವರು) : ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ, ಏನು ಕಳ್ಳರನ್ನು ಹಿಡಿಯಲು ಹೋಗಿ ತನ್ನ ಜೀವವನ್ನು ತೆತ್ತವನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಜೊತೆಗೆ, ಅವನಿಗೆ ಮರಣೋತ್ತರ ಶೌರ್ಯ ಪ್ರಶಸ್ತಿಯನ್ನು ಕೊಡಬೇಕು.

ಅಧ್ಯಕ್ಷರು : ಪ್ರಶಸ್ತಿ ಕೊಡುವಾಗ ಕೆ.ಜಿ.ಎಫ್.ನಲ್ಲಿ ನಡೆದ ಘಟನೆ ಬಗ್ಗೆ ಹೋರಾಟ ಮಾಡಿದ ಹುಡುಗನ ಬಗ್ಗೆಯೂ ಪ್ರಶಸ್ತಿ ಕೊಡಿ, ಅವನು ಒಳ್ಳೆಯ ಹುಡುಗ.

ಶ್ರೀ ಆರ್. ರೋಷನ್ ಬೇಗ್ : ಆಯಿತು.

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಕಾನೂನುಬಾಹಿರವಾಗಿ ಗಣಿ ವ್ಯವಹಾರ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಗಣಿ ಪ್ರದೇಶ ಬಹಳ ಇದ್ದು, ಅಲ್ಲಿ ಬೇನಾಮಿಯಾಗಿ ಗಣಿ ಮಾಡುವವರು ಬಹಳ ಜನ ಆಗಿರುವುದರಿಂದ ಆ ಭಾಗ ಕಾನೂನುಬಾಹಿರವಾಗಿ ಗಣಿ ವ್ಯವಹಾರದಲ್ಲಿ ತೊಡಗಿದೆ. ಇದರಿಂದ ಸರ್ಕಾರಕ್ಕೆ ಭಾರಿ ನಷ್ಟವಾಗುವುದರ ಜೊತೆಗೆ, ಬೇಕುಬೇಕಾದವರು ಎಲ್ಲಿಂದಲೋ ಬಂದು, ಲಾರಿ ತೆಗೆದುಕೊಂಡು ಬಂದು ಗಣಿ ಅದರುಗಳನ್ನು ತುಂಬಿಕೊಂಡು ಹೋಗುವಂಥ ಸ್ಥಿತಿ ನಿರ್ಮಾಣವಾಗಿದೆ. ಈ ಸದನದಲ್ಲಿ ಸನ್ಮಾನ್ಯ ಸಚಿವರೂ ಕೂಡ ಒಪ್ಪಿಕೊಂಡಿದ್ದರು, ಅಲ್ಲಿ ಬಂಗಾರದ ಅದುರೂ ಕೂಡ ಇದೆಯೆಂದು. ನಾವು ಅದಕ್ಕೆ ಕಾವಲು ಹಾಕುತ್ತೇವೆ, ರಕ್ಷಣೆ ಕೊಡುತ್ತೇವೆ ಎಂದು ಹೇಳಿದ್ದರು. ಇವತ್ತು ನೋಡಿದರೆ ನೂರಾರುಲಾರಿಗಳು ಬಂದು ಗಣಿ ಅದುರುಗಳನ್ನು ತುಂಬಿಕೊಂಡು ಹೋಗುತ್ತಿದ್ದಾರೆ. ಅಲ್ಲಿ 5 ಜನ, 10 ಜನಕ್ಕೆ ಕೂಡ ಲೀಸ್ ಆಗಿಲ್ಲ. ಇದನ್ನು ಸರ್ಕಾರದವರು ತಡೆಯುತ್ತೀರಾ? ಬೊಕ್ಕಸಕ್ಕೆ ಆಗತಕ್ಕ ನಷ್ಟವನ್ನು ಉಳಿಸುತ್ತೀರಾ? ಮತ್ತೆ ಕಾನೂನುಬದ್ಧವಾಗಿ ಯಾರು ಗಣಿ ಗುತ್ತಿಗೆ ತೆಗೆದುಕೊಂಡಿದ್ದಾರೆ, ಅವರಿಗೆ ರಕ್ಷಣೆ ಕೊಡುತ್ತೀರಾ ಎಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) : ಅಧ್ಯಕ್ಷರೇ, ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಟ್ಟು ಕಬ್ಬಿಣದ ಅದುರು, ಮ್ಯಾಂಗನೀಸ್, ಲೈಮ್‌ಸ್ಟೋನ್ ಇತ್ಯಾದಿ ಮುಖ್ಯ ಖನಿಜಗಳಾದ ಒಟ್ಟು 44 ಖನಿಜಗಳಿಗೆ ಗಣಿ ಗುತ್ತಿಗೆ ನೀಡಲಾಗಿದೆ. ಈ ಗಣಿ ಗುತ್ತಿಗೆಯನ್ನು ಮೈನ್ಸ್ ಅಂಡ್ ಮಿನರಲ್ 1957 ಹಾಗೂ ಖನಿಜ ರಿಯಾಯಿತಿ ನಿಯಮ 90ರ ಅನ್ವಯ ಮಂಜೂರ್ಮಾಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ವಸೂಲಾಗಿರುವ ರಾಜಸ್ವದ ವಿವರಗಳು 1995-96ರಲ್ಲಿ 2 ಕೋಟಿ 12 ಲಕ್ಷದ 54 ಸಾವಿರ 590, 1996-97ರಲ್ಲಿ ಒಂದು ಕೋಟಿ

ಐವತ್ತೊಂಭತ್ತು ಲಕ್ಷದ ಅರವತ್ಮೂರು ಸಾವಿರ ಇದೆ. ಇತ್ತೀಚಿನ ಶ್ರೇಷ್ಠ ನ್ಯಾಯಾಲಯದ ಆದೇಶದನ್ವಯ ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವ 14 ಗಣಿ ಗುತ್ತಿಗೆಗಳ ಗಣಿಗಾರಿಕೆ ನಿಲ್ಲಿಸಿದ ಕಾರಣ 1997-98ರ ರಾಜಸ್ವ ಇಳಿಮುಖವಾಗಿದೆ. ಗುತ್ತಿಗೆದಾರರ ಗಣಿ ಚಟುವಟಿಕೆಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಹಾಗೂ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಇಲಾಖೆಗಳ ಅಧಿಕಾರಿಗಳಿಂದ ವಿವಿಧ ನಿಯಮಗಳನ್ನು ಅನುಸರಿಸುತ್ತಿರುವರೇ ಇಲ್ಲವೇ ಎಂಬುದರ ಬಗ್ಗೆ ತಪಾಸಣೆ ಮಾಡುತ್ತಿರುತ್ತಾರೆ. ಅನಧಿಕೃತ ಗಣಿಗಾರಿಕೆ ಮತ್ತು ಸಾಗಾಣಿಕೆ ಬಗ್ಗೆ ಬಂದಿರುವ ದೂರುಗಳನ್ನೂ ಸಹ ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಇಲಾಖಾ ನೌಕರರನ್ನು ನೇಮಿಸಲಾಗಿದೆಯಲ್ಲದೆ, ರಸ್ತೆ ತಪಾಸಣೆಯನ್ನೂ ಸಹ ಮಾಡಲಾಗುತ್ತಿದೆ. ವಾರದಲ್ಲಿ ಒಂದು ಸಾರಿ ಅಂತಹ ಸ್ಥಳಗಳಿಗೆ ಭೇಟಿ ನೀಡಿ, ಅನಧಿಕೃತ ಗಣಿಗಾರಿಕೆಗೆ ಉಪಯೋಗಿಸುತ್ತಿದ್ದ ಸಲಕರಣೆಗಳನ್ನು ವಶಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ. ಯಾವುದೇ ಅನಧಿಕೃತ ಗಣಿಗಾರಿಕೆಗಳು ಕಂಡುಬಂದಲ್ಲಿ ತುಮಕೂರಿನ ಇಲಾಖೆಯ ಅಧಿಕಾರಿ ಅಂತಹ ಗಣಿಗಾರಿಕೆ ನಡೆಸುವವರ ವಿರುದ್ಧ ನಿಯಮಾನುಸಾರ ದಾಖಲು ಮಾಡಲು ಕ್ರಮ ಕೈಗೊಳ್ಳುತ್ತಾರೆ. ಅನಧಿಕೃತ ಗಣಿಗಾರಿಕೆ ಚಟುವಟಿಕೆಗಳು ಇತ್ತೀಚೆಗೆ ಇಲಾಖೆಯ ಗಮನಕ್ಕೆ ಬಂದಿಲ್ಲ. ಒಂದು ಪಕ್ಷ ಇದ್ದರೆ, ಆ ಮಾಹಿತಿಗಳನ್ನು ಕೊಡಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಮಂಗಳೂರಿನಿಂದ ಬೆಂಗಳೂರಿಗೆ ಬರುವಾಗ 20 ಕಿ.ಮೀ. ದೂರದಲ್ಲಿ ಪಹಣಿ ಮಂಗಳೂರು ಸೇತುವೆಯಲ್ಲಿ ಏಕಮುಖ ವಾಹನಗಳ ಸಂಚಾರಕ್ಕೆ ಅಡಚಣೆ

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನಿಂದ ಬೆಂಗಳೂರಿಗೆ ಬರುವಾಗ ಮಂಗಳೂರಿನಿಂದ ಕೇವಲ 20 ಕಿಲೋಮೀಟರ್ ದೂರದಲ್ಲಿ ಪಹಣಿ ಮಂಗಳೂರು ಸೇತುವೆ ಇದೆ. ಇಲ್ಲಿ ಸಮಸ್ಯೆ ಬರುವಂತಾದ್ದು, ಎರಡೂ ದಿಕ್ಕಿನಿಂದ ಏಕ ಕಾಲದಲ್ಲಿ ವಾಹನಗಳು ಒಂದು ಕಡೆಯಲ್ಲಿ ಜಾಮ್ ಆಗಿ ಮೈಲುಗಟ್ಟಲೆ ಕ್ಯೂ ಆಗುವಂತಾದ್ದು, ಗಂಟೆಗಟ್ಟಲೆ ಕಾಯುವಂತಾದ್ದು ಆಗುತ್ತಿದೆ. ಬಹುಶಃ ಅನೇಕ ಸಂದರ್ಭಗಳಲ್ಲಿ ಬೆಂಗಳೂರಿಗೆ ತುರ್ತು ಸಮಯಕ್ಕೆ ಬರುವುದಕ್ಕೆ ಸಂಪೂರ್ಣ ವಿಫಲವಾಗಿದೆ. ಈ ನಿಟ್ಟಿನಲ್ಲಿ ತಾವು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಸೂಕ್ತ ಆದೇಶವನ್ನು ಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಅದರ ಜೊತೆ ಜೊತೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡ್ಡಾಯವಾಗಿ ಎಲ್ಲಾ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ನಾಗರೀಕ ಸಲಹಾ ಸಮಿತಿಯ ಮೀಟಿಂಗನ್ನು ಮಾಡಬೇಕು ಮತ್ತು ಅನೇಕ ಕಡೆಗಳಲ್ಲಿ ಜನಪ್ರತಿನಿಧಿಗಳನ್ನು, ಕಾರ್ಪೊರೇಟರುಗಳನ್ನು ಕರೆಯುತ್ತಾ ಇಲ್ಲವೆಂಬ ದೂರೂ ಕೂಡ ನನ್ನಲ್ಲಿ ಬಂದಿದೆ. ಆದ್ದರಿಂದ ತಕ್ಷಣ ಇದರ ಬಗ್ಗೆ ಗಮನಹರಿಸಿ ಎಲ್ಲಾ ಕಡೆಯಲ್ಲಿ ಈ ತರಹ ನಾಗರೀಕ ಸಲಹಾ ಸಮಿತಿಯ ಮೀಟಿಂಗ್ ಮಾಡಬೇಕು ಮತ್ತು ಎಲ್ಲಾ ಕಾರ್ಪೊರೇಟರುಗಳನ್ನು ಕರೆಯಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) : ಈಗಲೇ ಅವರ ಜಿಲ್ಲೆಯ ಎಸ್.ಪಿ.